**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಿಹರ**

**MVC-25/2016 & 695/2016**

**RW-3**

**ಹೆಸರುಃ** ಶ್ರೀ ಜೆ.ಎಸ್ ನ್ಯಾಮಗೌಡರ.

**ತಂದೆಃ** ಶರಣಪ್ಪ.

**ವಯಸ್ಸುಃ** **50** ವರ್ಷ.

**ಕೆಲಸಃ** **DYSP,** ಹುಮ್ನಾಬಾದ್ .

**ವಾಸಃ** ಬೀದರ್.

**ಇಂದು ದಿನಾಂಕ:17-03-2025 ರಂದು** ಸಾಕ್ಷಿಯನ್ನು **ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ** ಪಿ.ಕೆ.ಎಸ್ **ವಕೀಲರಿಂದ 2** ನೇ ಎದುರುದಾರರ ಪರ**:**

ನಾನು ದಿನಾಂಕಃ07-05-2015 ರಿಂದ ದಿನಾಂಕಃ10-07-2017 ವರೆಗೆ CPI ಹರಿಹರ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಸಿ.ಆರ್ ನಂಬರ್ 101/2015 ಕುರಿತು ತನಿಖೆ ಮಾಡಿ, ದಿನಾಂಕಃ11-06-2015 ರಂದು ವಾಹನ ನಂಬರ್ ಕೆ.ಎ-17 ಬಿ 7999 ಮಾಲೀಕ ವಾಹನದ ಚಾಲಕ ಅಬ್ದುಲ್ ರಜಾಕ್ ನನ್ನು ಕರೆದುಕೊಂಡು ಬಂದು ಠಾಣೆಗೆ ಹಾಜರುಪಡಿಸಿದ್ದು, ಆ ಸದರಿಯವರನ್ನು ದಸ್ತ ಗಿರ್ ನಿಯಮ ಪಾಲಸಿ, ದಸ್ತ ಗಿರ್ ಮಾಡಿರುತ್ತೇನೆ. ವಾಹನದ ಮಾಲೀಕ, ಮತ್ತು ಚಾಲಕ ಹಾಜರುಪಡಿಸಿದ ಆರ್.ಸಿ, ಡಿ.ಎಲ್ ಮತ್ತು ವಿಮೆಯನ್ನು ಪರಿಶೀಲನೆ ಮಾಡಿರುತ್ತೆನೆ. ಮೂಲ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಪರಿಶೀಲಿಸಿ, ಜೇರಾಕ್ಸ್ ಪ್ರತಿಯನ್ನು ಪಡೆದುಕೊಂಡು ಮೂಲ ಪ್ರತಿಗಳನ್ನು ವಾಪಸ್ಸು ಮಾಲೀಕರಿಗೆ ನೀಡಿರುತ್ತೇನೆ. ನಂತರದಲ್ಲಿ ವಾಹನ ತಪಸಣಗೆ ಮತ್ತು ವಾಹನದ ದಾಖಲಾತಿಗಳನ್ನು ಪರಿಶೀಲಿಸಲು ಎಂ.ವಿ.ಐ ಇವರಿಗೆ ಯಾದಿ ಬರೆದಿರುತ್ತೇನೆ. ಚಾಲಕನ ಡಿ.ಎಲ್ ಕುರಿತು ಆರ್.ಟಿ.ಓ

ಮುಂಬಯಿ ಇವರಿಗೆ ಪರಿಶೀಲಿಸಿ ವರದಿ ನೀಡಲು ಪತ್ರದ ಮುಖಾಂತರ ಕೋರಿಕೊಂಡಿರುತ್ತೇನೆ. ನಂತರ ತನಿಖೆ ಪೂರ್ಣಗೊಳಿಸಿ ಆರೋಪಿಯ ವಿರುದ್ಧ ಚಾರ್ಜ್ ಶೀಟ್ ಸಲ್ಲಿಸಿರುತ್ತೇನೆ. ನಾನು ದೋಷರೋಪಣಾ ವರದಿ ಸಲ್ಲಿಸುವ ಸಮಯದಲ್ಲಿ, ಮುಂಬಯಿ ಆರ್.ಟಿ.ಓ ಇವರಿಂದ ವಾಹನದ ದಾಖಲಾತಿಗಳ ಕುರಿತು ಯಾವುದೇ ಉತ್ತರ ಬಂದಿರುವುದಿಲ್ಲ. ಫೋನ್ ಮುಖಾಂತರ ಕೇಳಿದಾಗಲೂ, ನಮಗೆ ಟಪಾಲ್ ಮುಖಾಂತರ ಕಳುಹಿಸುತ್ತೇವೆ ಎಂದು ತಿಳಿಸಿರುತ್ತಾರೆ. ಸದರಿ ಚಾಲಕನ ಡಿ.ಎಲ್ ಕುರಿತು ನಮ್ಮ ಆರ್.ಟಿ.ಓ ಇವರಿಂದ ಯಾವುದೇ ಮಾಹಿತಿ ಲಭ್ಯ ಇಲ್ಲ ಎಂದು ತಿಳಿಸಿರುತ್ತಾರೆ. ಮುಂಬಯಿಯ ಆರ್.ಟಿ.ಓ ರವರಿಗೆ ಕೇಳಬೇಕು ಎಂದು ಹೇಳಿರುತ್ತಾರೆ. ನಮ್ಮಲ್ಲಿ ಲಭ್ಯ ಇರುವ ಮಾಹಿತಿ ಪರಿಶೀಲಿಸಿದಾಗ ಈ ಕುರಿತು ಯಾವುದೇ ನಕರಾತ್ಮಕ ಮಾಹಿತಿ ಸಿಕ್ಕಿರುವುದಿಲ್ಲ.

ಎಂ.ವಿ.ಸಿ ನಂಬರ್ 25/2016 ರ 1 ನೇ ಅರ್ಜಿದಾರರ ನಮ್ಮ ಪೋಲೀಸ್ ಸಿಬ್ಬಂದಿ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು 2 ನೇ ಎದುರುದಾರರ ಪರ ವಕೀಲರು ಅನುಮತಿ ಕೇಳಿದ್ದು, ನೀಡಲಾಯಿತು.)

ಪಾಟೀ ಸವಾಲು ಶ್ರೀ ಪಿ.ಕೆ. ಎಸ್ ವಕೀಲರಿಂದ **2** ನೇ ಎದುರುದಾರರ ಪರಃ

ನಾನು ತನಿಖೆಯ ಸಮಯದಲ್ಲಿ ಚಾಲಕನ ಡಿ.ಎಲ್ ಕುರಿತು ಸರಿಯಾದ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ. ನಿ.ಆರ್-9 ನ್ನು ಮುಂಬಯಿ ಆರ್.ಟಿ.ಓ ರವರು, ಸದರಿ ನಂಬರ್ ನ ಡಿ.ಎಲ್ ನೀಡಿಲ್ಲ ಎಂದು ದಾಖಲೆ ನೀಡಿರುತ್ತಾರೆ ಎಂದರೆ ಇರಬಹುದು. ಮುಂಬಯಿ ಆರ್.ಟಿ.ಓ ಇವರ ಅಧಿಕಾರಿ ಸಹ ಈ ಅರ್ಜಿಯಲ್ಲಿ ನಿ.ಆರ್-6 ರಂತೆ ಸಾಕ್ಷಿ ನುಡಿದು, ಸದರಿ ಅನುಕ್ರಮ ನಂಬರ್ ನಲ್ಲಿ, ಡಿ.ಎಲ್ ನೀಡಲಾಗಿಲ್ಲ ಎಂದು ಸಾಕ್ಷಿ ಹೇಳಿದ್ದಾರೆ ಎಂದರೆ ಇರಬಹುದು.

ಡಿ.ಎಲ್ ನೈಜತೆ ಕುರಿತು ಪರಿಶೀಲಿಸಲು, ಒಬ್ಬ ಸಿಬ್ಬಂದಿಯನ್ನು ಆರ್.ಟಿ.ಓ ಮುಂಬಯಿಗೆ ಹೋಗಲು ನಿಯೋಜಿಸಬಹುದಿತ್ತು ಎಂದರೆ ಸಾಕ್ಷಿ, ತನಿಖೆಯ ಸಮಯದಲ್ಲಿ ಚಾಲಕ ಮೂಲ ಡಿ.ಎಲ್ ಹಾಜರುಪಡಿಸಿದ್ದು, ಅದನ್ನು ಪರಿಶೀಲಿಸಿ, ಅದರ ಜೆರಾಕ್ಸ್ ಪ್ರತಿ ಪಡೆದು, ಅದರ ನೈಜತೆ ಕುರಿತು ಸಂಬಂಧಪಟ್ಟ ಆರ್.ಟಿ.ಓ ರವರಿಗೆ ಪತ್ರ ಮುಖಾಂತರ ಮಾಹಿತಿ ಕೇಳಿಕೊಳ್ಳುತ್ತೇವೆ. ಅದೇ ರೀತಿ ನಮ್ಮಲ್ಲಿ ಲಭ್ಯ ಇರುವ ತಂತ್ರಾಂಶ ಮುಖಾಂತರವೂ ನೈಜತೆಯ ಬಗ್ಗೆ ಪರಿಶೀಲನೆ ಮಾಡುತ್ತೇವೆ. ದಿನಾಂಕ:11-06-2015 ರಂದು 3 ನೇ ಎದುರುದಾರನಿಗೆ ಸದರಿ ವಾಹನವನ್ನು ಚಲಾಯಿಸಲು ಸೂಕ್ತ ಡಿ.ಎಲ್ ಇರಲಿಲ್ಲ ಎಂದರೆ ಸರಿಯಲ್ಲ. ವಾಹನದ ಮಾಲೀಕ ಮತ್ತು ಚಾಲಕ ಮೂಲ ಡಿ.ಎಲ್ ಹಾಜರುಪಡಿಸಿದ್ದು, ಸದರಿ ದಾಖಲೆಯ ಮೇಲೆ ಸಂಬಂಧಪಟ್ಟ ಆರ್.ಟಿ.ಓ ರವರ ಸೀಲ್ ಮತ್ತು ಸಹಿ ಇದ್ದ ಕಾರಣ, ಅದರ ನೈಜತೆಯ ಬಗ್ಗೆ ಪರಿಶೀಲನೆಗಾಗಿ ಸಂಬಂಧಪಟ್ಟ ಇಲಾಖೆಗೆ ಪತ್ರ ಮುಖೇನ ಕೋರಿಕೊಂಡಿರುವುದು ಇರುತ್ತದೆ. 1 ನೇ ಅರ್ಜಿದಾರ ನಮ್ಮ ಇಲಾಖೆಯ ಸಿಬ್ಬಂದಿ ಇರುವ ಕಾರಣ, ಆತನಿಗೆ ಸಹಾಯ ಮಾಡಲು 1 ನೇ ಅರ್ಜಿದಾರ ಮತ್ತು 3 ನೇ ಎದುರುದಾರರ ಜೊತೆಗೆ ಶಾಮೀಲಾಗಿ ತರಾತುರಿಯಲ್ಲಿ ಚಾರ್ಜ್ ಶೀಟ್ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಒಬ್ಬ ವ್ಯಕ್ತಿ ನಂತರದಲ್ಲಿ ತಪ್ಪು ಮಾಹಿತಿ ನೀಡಿ, ಖೊಟ್ಟಿ ಲೈಸೆನ್ಸ್ ಕೊಟ್ಟಿದ್ದಾನೆ ಎಂದು ಗೊತ್ತಾದ ನಂತರ ಮುಂದಿನ ತನಿಖೆ ನಮಗೆ ಮಾಡಲು ಅವಕಾಶ ಇರುತ್ತದೆ ಎಂದರೆ ಸರಿ. ಡಿ.ಎಲ್ ಇಲ್ಲ ಎಂದು ಗೊತ್ತಿದ್ದರೂ, ನಾನು ವಾಹನದ ಮಾಲೀಕರನ್ನು ಉದ್ದೇಶ ಪೂರ್ವಕವಾಗಿ ಆರೋಪಿ ಎಂದು ಚಾರ್ಜ್ ಶೀಟ್ ನಲ್ಲಿ ಕಾಣಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಚಾಲಕ ಮತ್ತು ಮಾಲೀಕ ಎಲ್ಲಾ ಮೂಲ ದಾಖಲೆಗಳನ್ನು ಹಾಜರುಪಡಿಸಿದ್ದ ಕಾರಣ, ಮಾಲೀಕನನ್ನು ದಾಖಲೆಗಳು ಸೂಕ್ತ ಇವೆ ಎಂದು ಕಂಡು ಬಂದ ಕಾರಣ ಆರೋಪಿ ಎಂದು ಮಾಡಿರುವುದಿಲ್ಲ.

ಪಾಟೀ ಸವಾಲು ಶ್ರೀ ಜಿ.ಪಿ ವಕೀಲರಿಂದ **1** ನೇ ಎದುರುದಾರರ ಪರಃ

ತನಿಖೆಯ ಸಮಯದಲ್ಲಿ ಚಾಲಕನ ಮೂಲ ಡಿ.ಎಲ್ ನ್ನು ನೋಡಿ, ಜೆರಾಕ್ಸ್ ಪ್ರತಿಯನ್ನು ಇಟ್ಟುಕೊಂಡು ಮೂಲ ದಾಖಲೆಯನ್ನು ವಾಪಸ್ಸು ಕೊಡುತ್ತೇವೆ. 3 ನೇ ಎದುರುದಾರ ಹಾಜರುಪಡಿಸಿದ ಮೂಲ ಡಿ.ಎಲ್ ನೋಡಿ, ಜೆರಾಕ್ಸ್ ಇಟ್ಟುಕೊಂಡು ಆತನಿಗೆ ಮೂಲ ದಾಖಲೆ ವಾಪಸ್ಸು ನೀಡಿರುತ್ತೇನೆ ಎಂದರೆ ಸರಿ.

ಪಾಟೀ ಸವಾಲು ಶ್ರೀ ಆರ್.ಜಿ.ಬಿ ವಕೀಲರಿಂದ ಅರ್ಜಿದಾರರ ಪರಃ

ವಾಹನದ ದಾಖಲಾತಿಗಳನ್ನು ತನಿಖೆಯ ಸಮಯದಲ್ಲಿ ನೋಡಿರುತ್ತೇನೆ. ತನಿಖೆಯ ಸಮಯದಲ್ಲಿ ನನಗೆ ಡಿ.ಎಲ್ ನಕಲಿ ಇದೆ ಎಂದು ತಿಳಿದು ಬಂದಿಲ್ಲ. ಆ ಕಾರಣದಿಂದ ಕಲಂ 3 ಎಂ.ವಿ ಕಾಯ್ದೆಯ ಅಡಿ ಚಾರ್ಜ್ ಶೀಟ್ ಸಲ್ಲಿಸಿಲ್ಲ.

**3** ನೇ ಎದುರುದಾರರ ಪರ ವಕೀಲರು ಗೈರು ಹಾಜರು ಇದ್ದು, ಅವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**